ಭಾನುವಾರ 21-09-2025 ಬೆಂಗಳೂರು ಬೆಲೆ: 5ರೂ, 4ಪಟಗಳು ಸಂಪುಟ 01-ಸಂಚಿಕೆ 57

Digital Varthe Kannada Daily Volume 01 - Issue 57 Sunday 21-09-2025 Price: 5/- Rs 2 Pages Bengalore

DIGITAL VARTHE

www.digitalvarthe.com
digitalvarthe@gmail.com

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

ಅಭಿಷೇಕ್ ಚಿಕ್ಕಮಾರನಹಳ್ಳಿ
ಸಂಪಾದಕರು

ಪುರುಷೋತ್ತಮ್ ಬಿ.ಹೆಚ್
ವ್ಯವಸ್ಥಾಪಕರು

RNI:KNKAN/25/A1348

ಕನ್ನಡ ದಿನಪತ್ರಿಕೆ

## ಕಾಮಗಾರಿ ಬಗೆ ಸುಳ್ಳು ಆರೋಪ ಮಾಡಿದವರ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ



ಕೃಷ್ಣರಾಜಪೇಟೆ: ತಾಲ್ಲೂಕಿನ ಬೂಕನಕೆರೆ ಹೋಬಳಿಯ ಅರಳಕುಪ್ಪೆ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ಗುಣಮಟ್ಟದಿಂದ ನಡೆಯುತ್ತಿವೆ. ಆದರೆ ಗ್ರಾಮದ ಕೆಲವರು ರಾಜ-ಕೀಯ ಕಾರಣಗಳಿಗಾಗಿ ಕಾಮಗಾರಿ ಸರಿಯಾಗಿ ನಡೆಯುತ್ತಿಲ್ಲ. ಕಳಫೆ ಗುಣಮಟ್ಟದಿಂದ ನಡೆಯುತ್ತಿವೆ ಎಂದು ಆರೋಪ ಮಾಡುತ್ತಿರುವವರ ವಿರುದ್ಧ ಅರಳಕುಪ್ಪೆ ಗ್ರಾಮಸ್ಥರು ಗ್ರಾಮದ ಅರಳಿಕಟ್ಟೆ ಮುಂದೆ ಪ್ರತಿಭಟನೆ ನಡೆಸಿ ಸ್ಪಷ್ಟೀಕರಣ ನೀಡಿದ್ದಾರೆ.

ಶಾಸಕರಾದ ಹೆಚ್.ಟಿ.ಮಂಜು ಅವರ ವಿಶೇಷ ಆಸಕ್ತಿಯಿಂದಾಗಿ ತಮ್ಮ ಆಪ್ತ ಸಹಾಯಕ ಪ್ರತಾಪ್ ಅವರ ಒತ್ತಾಯದ ಮೇರೆಗೆ ಸುಮಾರು 75ಲಕ್ಷ ರೂಪಾಯಿಗಳನ್ನು ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅನುಧಾನ ನೀಡಿದ್ದಾರೆ. ಕಾಮಗಾರಿಗಳು ಇದೀಗ ಆರಂಭವಾಗಿವೆ ಆದರೆ ಗ್ರಾಮದ ಕೆಲವರು ರಾಜಕೀಯ ಕಾರಣಗಳಿಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ಕಾಮಗಾರಿ ಸರಿಯಾಗಿ ನಡೆಯುತ್ತಿಲ್ಲ ಎಂದು ಆರೋಪ ಮಾಡಿ ವಿಡಿಯೋ ಹಾಕಿರುತ್ತಾರೆ. ಇದು ಸತ್ಯಕ್ಕೆ ದೂರವಾದ ವಿಚಾರವಾಗಿದೆ.

ಅರಳಕುಪ್ಪೆಯಿಂದ ವಿಜಯಹೊಸಹಳ್ಳಿ ಕಡೆಗೆ ಹೋಗುವ ರಸ್ತೆಯು ಕಳೆದ 25ವರ್ಷಗಳಿಂದ ದುರಸ್ತಿ ಕಾಣದೇ ಗುಂಡಿ-ಕೊರಕಲು ಬಿದ್ದು ಹಾಳಾಗಿತ್ತು. ಇದನ್ನು ಮನಗಂಡು ಶಾಸಕರಾದ ಹೆಚ್.ಟಿ.ಮಂಜು ಅವರು ಬರೋಬ್ಬರಿ 75ಲಕ್ಷ ರೂಪಾಯಿಗಳನ್ನು ಸದರಿ ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಅನುಧಾನ ನೀಡಿದ್ದಾರೆ. ಇದರಿಂದ ಅರಳಕುಪ್ಪೆ ಅಭಿವೃದ್ಧಿಯನ್ನು ಕಾಣುತ್ತಿದೆ. ಇದನ್ನು ಸಹಿಸಲಾಗದೇ ಗ್ರಾಮದ ಮುಖಂಡ ಎ.ಸಿ.ಸೋಮೇಗೌಡ ಸ್ವತಃ ಗುತ್ತಿಗೆದಾರರಾಗದ್ದು ಚನ್ನಾಗಿ ನಡೆಯುತ್ತಿರುವ ಕಾಮಗಾರಿಯನ್ನು ಕಳಪೆ ಕಾಮಗಾರಿ ನಡೆಯುತ್ತಿದೆ ಎಂದು ಆರೋಪ ಮಾಡುತ್ತಿರುವುದು ಸರಿಯಲ್ಲ.

ಸುಳ್ಳು ಆರೋಪ ಮಾಡುವುದನ್ನು ಬಿಟ್ಟು ಒಂದು ವೇಳೆ ಕಾಮಗಾರಿ ಸರಿಯಾಗಿ ನಡೆಯದೇ ಇದ್ದಲ್ಲಿ ಸ್ಥಳಕ್ಕೆ ಬೇಟಿ ನೀಡಿ ಸರಿಯಾಗಿ ಮಾಡುವಂತೆ ಗುತ್ತಿಗೆದಾರರಿಗೆ ತಿಳುವಳಿಕೆ ನೀಡಿ ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳಬೇಕು ಎಂದು ಅರಳಕುಪ್ಪೆ ಗ್ರಾಮ ಪಂಚಾಯಿತಿ ಸದಸ್ಯರಾದ ಚಂದ್ರೋಜಿ-ರಾವ್, ಮುಖಂಡರಾದ ಕೃಷ್ಣಪ್ರಸಾದ್, ಎ.ಎಸ್.ರಾಮೇಗೌಡ, ರವಿಕುಮಾರ್, ಮನು, ಯೋಗೇಶ್, ಎ.ಜಿ.ಮೋಹನ್, ರಾಜೇಶ್, ನಾಗೇಗೌಡ, ಪುಟ್ಟಸ್ವಾಮಿ, ದೇವರಾಜೇಗೌಡ, ರೂಪೇಶ್, ಚಂದ್ರೇಗೌಡ, ಎ.ಟಿ.ಮಹೇಶ್, ಎ.ಸಿ.ರಮೇಶ್ ಸೇರಿದಂತೆ ಗ್ರಾಮದ ಹಲವಾರು ಮುಖಂಡರು ಸುಳ್ಳು ಆರೋಪ ಮಾಡುತ್ತಿರುವವರ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

**ವರದಿಯೋಂದಿಗೆ: ಸಾಯಿಕುಮಾರ್. ಎನ್. ಕೆ,**

## 331 ಹೊಸ ಜಾತಿಗಳು ಎಲ್ಲಿಂದ ಹುಟ್ಟಿಕೊಂಡವು: ನಿಖಿಲ್ ಕುಮಾರಸ್ವಾಮಿ



ಬೆಂಗಳೂರು: ಸರ್ಕಾರದಿಂದ ಸಿಗಬೇಕಾದ ಸೌಲಭ್ಯ ಸಮಾಜದ ಕಟ್ಟಕಡೆಯ ವ್ಯಕ್ತಿ ಗುರುತಿಸಿ ತಯಾರಿಸುವ ಜಾತಿಗಣತಿಯನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಇದು ಅವೈಜ್ಞಾನಿಕವಾಗಿ ತಯಾರಿಸಿರುವ ವರದಿ ಆಗಿದ್ದು, ವಿರೋಧಿಸುತ್ತೇವೆ' ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು. ಆದಿಚುಂಚನಗಿರಿ ಶಾಖ ಮಠದಲ್ಲಿ ಆಯೋಜಿಸಿದ್ದ ಒಕ್ಕಲಿಗ ಸಮುದಾಯದ ಜಾಗೃತಿ ಸಭೆಯ ನಂತರ ಮಾಧ್ಯಮಗಳ ಜೊತೆ ನಿಖಿಲ್ ಕುಮಾರಸ್ವಾಮಿ ಅವರು ಮಾತನಾಡಿದರು.

ಸಮಾಜ ಸಮಾಜ ಜೊತೆ ಸಂಘರ್ಷ ತರಲು ರಾಜ್ಯ ಸರ್ಕಾರ ಹೊರಟಿದೆ. 331 ಹೊಸ ಜಾತಿ ಎಲ್ಲಿ ಹುಟ್ಟಿಕೊಂಡಿದೆ ಗೊತ್ತಿಲ್ಲ ಎಂದು ಜಾತಿ ಸಮೀಕ್ಷೆ ಬಗ್ಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿಯವರು ವ್ಯಂಗ್ಯವಾಡಿದರು.ಕುಮಾರಣ್ಣನವರು ಕಾಂತರಾಜು ವರದಿಯನ್ನ ರಿಜೆಕ್ಟ್ ಮಾಡ್ತಾರೇ, ಮಧುಸುದನ್ ಅಧ್ಯಕ್ಷರಾದ 15 ದಿನದಲ್ಲಿ 2 ಕೋಟಿ ಜನರ ಮಾಹಿತಿ ಕಲೆ ಹಾಕಲು ಸಾಧ್ಯವಾ.? ಎಂದು ನಿಖಿಲ್ ಅವರು ಪ್ರಶ್ನಿಸಿದರು. ಜಾತಿ ಸಮೀಕ್ಷೆಗಳು ಆಗಬೇಕಾಗಿರೋದು ಕಟ್ಟಕಡೆಯ ವ್ಯಕ್ತಿ ಮೇಲೆತ್ತಲು ಮಾಡಬೇಕು. ಆರ್ಥಿಕ ಮತ್ತು ಸಾಮಾಜಿಕವಾಗಿ ನ್ಯಾಯವಾದಿಸುವ ನಿಟ್ಟಿನಲ್ಲಿ ಈ ಸಮೀಕ್ಷೆಗಳು ಆಗುವದರಲ್ಲಿ ನಮ್ಮ ಸ್ವಾಗತ ಇದೆ. ಆದರೆ ಇದರ ಹಿಂದೆ ದುರುದ್ದೇಶಗಳನ್ನು ಇಟ್ಟುಕೊಂಡು ಒಂದು ಸಮುದಾಯವನ್ನು ಮೇಲೆತ್ತಿಕೊಳ್ಳುವುದಕ್ಕೆ.

ಇನ್ನೊಂದು ಪ್ರಬಲ ಸಮುದಾಯದ ನಂಬರ್ ಗಳನ್ನು ಮುಂದಿಟ್ಟು ಸಮಾಜ ಸಮಾಜಗಳ ನಡುವೆ ಸಂಘರ್ಷ ಉಂಟು ಮಾಡುವುದಕ್ಕೆ ಸರ್ಕಾರ ಮುಂದಾಗಬಾರದು ಎಂದು ಹೇಳಿದರು.ಇಲ್ಲಿ 331 ಹೊಸ ಜಾತಿಗಳು ಎಲ್ಲಿಂದ ಹುಟ್ಟಿಕೊಳ್ಳುತ್ತೋ ಗೊತ್ತಿಲ್ಲ. ಕಾಂತರಾಜು ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗದ ಆಯೋಗ ಮಾಡಿಕೊಂಡು 180 ಕೋಟಿ ಖರ್ಚು ಮಾಡಿದರು, ಈಗ ಮಧುಸೂದನ್ ಅವರ ಅಧ್ಯಕ್ಷತೆಯಲ್ಲಿ ಹೊಸ ಆಯೋಗವನ್ನು ರಚಿಸಿ 15 ದಿನದಲ್ಲಿ 2 ಕೋಟಿ ಜನರ ಮಾಹಿತಿ ಕಲೆ ಹಾಕಲು ಸಾಧ್ಯವಾ...? ಇಂದು ನಿಖಿಲ್ ಕುಮಾರಸ್ವಾಮಿ ಅವರು ಕಿಡಿಕಾರಿದರು.

10 ವರ್ಷದಲ್ಲಿ ಆಗದೆ ಇರುವಂತಹ ಜಾತಿ ಸಮೀಕ್ಷೆ ಹೀಗ್ಯಾಕೆ.? ರಾಜ್ಯ ಸರ್ಕಾರಕ್ಕೆ ಸಮೀಕ್ಷೆ ಮಾಡೋದಕ್ಕೆ ಅಧಿಕಾರವಿದೆ. ಆದ-'ರೆ ಅಂತಿಮವಾಗಿ ಕೇಂದ್ರ ಸರ್ಕಾರ ಜಾತಿ ಗಣತಿ ಕಾಲಂ ನನ್ನ ಸೇರಿಸಿದ್ದಾರೆ. ನಾಲ್ಕು ತಿಂಗಳಲ್ಲಿ ಕೇಂದ್ರ ಸರ್ಕಾರದ ಕಡೆಯಿಂದ ಇಡೀ ರಾಜ್ಯ ವ್ಯಾಪ್ತಿ ಸಮೀಕ್ಷೆ ನಡೆಸುತ್ತಿದ್ದಾರೆ ಎಂದು ಹೇಳಿದರು. ಜಾತಿಗಣತಿ ವಿಚಾರದಲ್ಲಿ ಸರ್ಕಾರ ಆಗಾಗ ಕೆಲವೊಂದಿಷ್ಟು ಹೆಜ್ಜೆಗಳನ್ನ ಇಡುವುದನ್ನು ನೋಡಿದ್ದೇವೆ.ಈ ಹಿಂದೆಯೂ ಕೂಡ ಇದೇ ರೀತಿ ಜಾತಿಗಣತಿ ವಿಚಾರಕ್ಕೆ ಸಂಬಂಧಿಸಿದಂತೆ ಸಿಎಂ ನೇತೃತ್ವದ ಸಚಿವ ಸಂಪುಟದ ಸಭೆಯಲ್ಲಿ ಆಡಳಿತ ಪಕ್ಷದ ಮಂತ್ರಿಗಳಲ್ಲೇ ಅಪಸ್ವರ, ಭಿನ್ನಾಭಿಪ್ರಾಯ ಇರುವುದನ್ನ ನೋಡಿದ್ದೇವೆ ಎಂದು ಹೇಳಿದರು. ಜಾತಿಗಣತಿ ಎಲ್ಲಾ ಸಮುದಾಯದಲ್ಲಿ ಗೊಂದಲದ ವಾತಾವರಣ ಸೃಷ್ಟಿ ಮಾಡಿದೆ. ಈ ನೆಲೆಯಲ್ಲಿ ಪರಮ ಪೂಜ್ಯ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳ ನೇತೃತ್ವದಲ್ಲಿ ಸರ್ವ ಪಕ್ಷದ ಜನಪ್ರತಿನಿಧಿಗಳ ಜೊತೆ ಸಭೆ ನಡೆಸಿ ಕೆಲವೊಂದಿಷ್ಟು ವಿಚಾರಗಳ ಬಗ್ಗೆ ಚರ್ಚಿಸಿದ್ದೇವೆ ಎಂದು ತಿಳಿಸಿದರು.

## ಬೆಂಗಳೂರಲ್ಲಿ ಬೆಚ್ಚಗೆ ಮಲಗಿದ್ದ ರೌಡಿಗಳ ಚಳಿ ಬಿಡಿಸಿದ ಪೊಲೀಸರು




ಬೆಂಗಳೂರು: ಮನೆಗಳಲ್ಲಿ ಬೆಚ್ಚಗೆ ಹೊದ್ದು ಮಲಗಿದ್ದ ಹಾಗೂ ಬಾರ್‌ಗಳಲ್ಲಿ ನಶೆ ಏರಿಸಿಕೊಳ್ಳುತ್ತಿದ್ದ ರೌಡಿಗಳಿಗೆ ನಗರ ಪೊಲೀಸರು ರಾತ್ರಿ ಚಳಿ ಬಿಡಿಸಿದ್ದಾರೆ. ನಗರದ ಎಲ್ಲಾ 11 ವಿಭಾಗಗಳ ಹಾಗೂ ಸಿಸಿಬಿ ಪೊಲೀಸರು ಏಕಕಾಲದಲ್ಲಿ ರೌಡಿಗಳ ಮನೆಗಳು ಹಾಗೂ ವೈನ್ಸ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್‌ಗಳ ಮೇಲೆ ದಾಳಿ ನಡೆಸಿದ್ದಾರೆ. ನಗರದಲ್ಲಿ ಹೆಚ್ಚುತ್ತಿರುವ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಸಲುವಾಗಿ ರಾತ್ರಿ 11 ಗಂಟೆಯಿಂದ ನಗರದಾದ್ಯಂತ ರೌಡಿಗಳ ಮನೆಗಳ ಮೇಲೆ ದಿಢೀರ್ ದಾಳಿ ನಡೆಸಿ ಇಂದು ಬೆಳಗಿನ ಜಾವ 3 ಗಂಟೆಯವರೆಗೂ ಪೊಲೀಸರು ಕಾರ್ಯಾಚರಣೆ ನಡೆಸಿದರು.

ಸಾರ್ವಜನಿಕರ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಹಾಗೂ ಅಪರಾಧವನ್ನು ನಿಯಂತ್ರಿಸುವುದು ಮತ್ತು ಅಪರಾಧಿ ಅಂಶಗಳ ಜಾಲವನ್ನು ಧ್ವಂಸ ಮಾಡುವ ದೃಢ ಮತ್ತು ಮುಂಚೂಣಿ ಕ್ರಮವಾಗಿ ನಗರ ಪೊಲೀಸರು ಈ ದಾಳಿ ನಡೆಸಿದ್ದಾರೆ. ತಲೆ ಮರೆಸಿಕೊಂಡಿದ್ದ ರೌಡಿಗಳು,ವಾರಂಟುದಾರರು ಮತ್ತು ಪ್ರೋಕೇಮ್ ಮಾಡಿದ ಅಪರಾಧಿಗಳನ್ನು ಪತ್ತೆಹಚ್ಚುವುದು, ಜವಬ್ದಾ-ರಿತನವನ್ನು ಹೆಚ್ಚಿಸಿ ತಡೆಗಟ್ಟುವಿಕೆಗೆ, ಸಮುದಾಯದ ಭದ್ರತೆ ಮತ್ತು ಕಲ್ಯಾಣಕ್ಕೆ ಈ ದಾಳಿ ಸಹಕಾರಿಯಾಗಿದೆ. ರಾತ್ರಿಯಿಂದ ಬೆಳಗಿನ ಜಾವದವರೆಗೂ ಒಟ್ಟು 1478 ರೌಡಿಗಳ ಮನೆಗಳ ಮೇಲೆ ದಾಳಿ ನಡೆದಿದೆ. ಈ ಪೈಕಿ 165 ಹಳೆ ಆರೋಪಿಗಳ ಮನೆಗಳು, ತಲೆಮರೆಸಿಕೊಂಡಿದ್ದ 3 ರೌಡಿಗಳು, ವಾರೆಂಟ್ ಜಾ-ರಿಯಾದರೂ ಪತ್ತೆಯಾಗದ 7 ರೌಡಿಗಳು, ಪ್ರೋಕೇಮ್ ಮಾಡಿದ ಮೂವರು ರೌಡಿಗಳು ಪತ್ತೆಯಾಗಿದ್ದಾರೆ.

ದಾಳಿಯ ಸಂದರ್ಭದಲ್ಲಿ ಒಟ್ಟು 124 ಪ್ರಕರಣಗಳು ಹಾಗೂ ಮಾದಕ ವಸ್ತು ಬಳಕೆದಾರರ ವಿರದ್ಧ 10 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಅವರ ಮಾರ್ಗದರ್ಶನದಲ್ಲಿ, ಮೂವರು ಹೆಚ್ಚುವರಿ ಪೊಲೀಸ್ ಆಯುಕ್ತರು, 13 ಮಂದಿ ಡಿಸಿಪಿಗಳು, ನಗರದ ಎಲ್ಲಾ ವಿಭಾಗಗಳ ಎಸಿಪಿಗಳು, ಇನ್?ಸಪೆಕ್ಟರ್ ಹಾಗೂ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿದ್ದರು. ಈಶಾನ್ಯ ವಿಭಾಗದಲ್ಲಿ ನಗರ ಪೊಲೀಸರು 169 ರೌಡಿಗಳ ಮನೆಗಳ ಮೇಲೆ ದಾಳಿ ನಡೆದರೆ, ಉತ್ತರ -179, ಪೂರ್ವ-247, ಪಶ್ಚಿಮ-222, ಎಲೆಕ್ಟ್ರಾನಿಕ್ ಸಿಟಿ -100, ಆಗ್ನೇಯ-120,ಕೇಂದ್ರ ವಿಭಾಗ-20, ವಾಯುವ್ಯ-102, ವೈಟ್‌ಫೀಲ್?ಡ-140 ರೌಡಿಗಳ ಮನೆಗಳ ಮೇಲೆ ಏಕಕಾಲದಲ್ಲಿ ದಾಳಿ ಮಾಡಿದ್ದಾರೆ.

ಸಿಸಿಬಿ ಪೊಲೀಸರು 179 ರೌಡಿಗಳ ಮನೆಗಳ ಮೇಲೆ ಹಾಗೂ ಬಾರ್‌ಗಳ ಮೇಲೆ ದಾಳಿ ನಡೆಸಿ ರೌಡಿಗಳಿಗೆ ಚಳಿಯಲ್ಲೂ ಬೆವರಿಳಿಸಿದ್ದಾರೆ.ನಿರ್ಜನ (ಅಪಾಯದ)ಪ್ರದೇಶಗಳಲ್ಲಿ ನಿರಂತರ ನಿಗಾ ಮತ್ತು ಗುಪ್ತಚರ ಆಧಾರಿತ ಕಾರ್ಯಾಚರಣೆಗಳು ಮುಂದುವರೆಯುತ್ತವೆ. ಹಾಗೂ ದಾಳಿ ಸಂದರ್ಭದಲ್ಲಿ ಪತ್ತೆಯಾದ ರೌಡಿಗಳ ಪರಿಶೀಲನೆ ಮತ್ತು ಕಾನೂನು ಪ್ರಕ್ರಿಯೆಗಳು ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಬಿಬಿಎಂಪಿ ಮಾಜಿ ಸದಸ್ಯ ಹನುಮಂತೇಗೌಡ ಒತ್ತುವರಿ ಮಾಡಿಕೊಂಡಿದ್ದ 150 ಕೋಟಿ ವೌಲ್ಯದ



ಬೆಂಗಳೂರು: ಕಂಡ ಕಂಡ ಖಾಲಿ ಜಾಗಗಳಿಗೆ ಬೇಲಿ ಹಾಕುತ್ತಿದ್ದ ಬಿಬಿಎಂಪಿ ಮಾಜಿ ಸದಸ್ಯ ಹನುಮಂತೇಗೌಡ ಒತ್ತುವರಿ ಮಾಡಿಕೊಂಡಿದ್ದ ಕೋಟಿ ಕೋಟಿ ಬೆಲೆಬಾಳುವ ಬಿಡಿಎಗೆ ಸೇರಿದ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಬಿಡಿಎ ಎಸ್‌ಪಿ ಲಕ್ಷ್ಮೀಗಣೇಶ್ ನೇತೃತ್ವದಲ್ಲಿ ಇಂದು ದಿಢೀರ್ ದಾಳಿ ನಡೆಸಿದ ಪೊಲೀಸರು ಬಿಗಿ ಬಂದೋಬಸ್ತ್‌ನಲ್ಲಿ ಅಂದಾಜು 150 ಕೋಟಿ ರೂ. ಮೌಲ್ಯದ ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ.

ಕೆಂಗೇರಿ ಬಳಿಯ ವಳಗೆರೆಹಳ್ಳಿ ಸರ್ವೆ ನಂಬರ್‌ನಲ್ಲಿದ ಬಿಡಿಎಗೆ ಸೇರಿದ್ದ 1.22 ಎಕರೆ ಭೂಮಿಗೆ ಹನುಮಂತೇಗೌಡ ಬೇಲಿ ಹಾಕಿದ್ದರು. ಮಾತ್ರವಲ್ಲ ಆ ಜಮೀನನ್ನು ಪತ್ನಿ ಲತಾ ಹೆಸ-ರಿಗೆ ಖಾತೆ ಮಾಡಿಸಿದ್ದರು. ಬೇಲಿ ಹಾಕಿರುವ ಪ್ರದೇಶ ಬಿಡಿಎಗೆ ಸೇರಿದ್ದು ಜಾಗ ತೆರವು ಮಾಡುವಂತೆ ಬಿಡಿಎ ಅಧಿಕಾರಿಗಳು ಹಲವಾರು ಬಾರಿ ನೋಟೀಸ್ ನೀಡಿದ್ದರೂ ಹನುಮಂತೇಗೌಡ ಕ್ಯಾರೇ ಎಂದಿರಲಿಲ್ಲ. ಹೀಗಾಗಿ ಇಂದು ಮುಂಜಾನೆ ಲಕ್ಷ್ಮೀ ಗಣೇಶ್ ನೇತೃತ್ವದಲ್ಲಿ ದಾಳಿ ನಡೆಸಿ ಆಸ್ತಿ ವಶಪಡಿಸಿಕೊಳ್ಳಲಾಗಿದೆ. ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಹನುಮಂತೇಗೌಡ ಅವರು ಈ ಹಿಂದೆ ಹೇರೋಹಳ್ಳಿ ವಾರ್ಡ್‌ನಿಂದ ಬಿಬಿಎಂಪಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಹಾಗೂ ಯಲಹಂಕ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

## ಟಿಎಪಿಸಿಎಂಎಸ್ ಚುನಾವಣೆ: ಬರೋಬ್ಬರಿ 41ನಾಮಪತ್ರ ಸಲ್ಲಿಕೆ..!

ಕೃಷ್ಣರಾಜಪೇಟೆ: ತಾಲ್ಲೂಕು ಟಿಎಪಿಸಿ-ಎಂಎಸ್ ಸಂಸ್ಥೆಯ 14ಮಂದಿ ನಿರ್ದೇಶಕರ ಆಯ್ಕೆಗೆ ಇದೇ 28ರಂದು ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಇಂದು 10ನಾಮಪತ್ರಗಳು ಸಲ್ಲಿಕೆಯಾಗಿದ್ದು, ಇದೂವರೆವಿಗೂ 14 ಸ್ಥಾನಕ್ಕೆ ಬರೋಬ್ಬರಿ 41ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಟಿಎಪಿಸಿಎಂಎಸ್ ಚುನಾವಣಾಧಿಕಾರಿಯಾಗಿರುವ ತಹಸೀಲ್ದಾರ್ ಡಾ.ಎಸ್.ಯು.ಅಶೋಕ್ ತಿಳಿಸಿದ್ದಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳ ಮೂಲಕ ಆಯ್ಕೆಯಾಗಬೇಕಾಗಿರುವ ಎ.ತರಗತಿಯ 6ಸ್ಥಾನಗಳಿಗೆ ಜೆಡಿಎಸ್-ಬಿಜೆಪಿ ಮೈತ್ರಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳಾದ ವಿ.ಡಿ.ಹರೀಶ್, ಬಿ.ಎಂ.ಕಿರಣ್, ಕುರುಬಹಳ್ಳಿ ಕೆ.ಬಿ.ನಾಗೇಶ್, ಆಲಂಬಾಡಿ ಎ.ಟಿ.ಕರಿಶೆಟ್ಟಿ, ಟಿ.ಬಲದೇವ್, ಹೆಚ್.ಟಿ.ಲೋಕೇಶ್ ಅವರುಗಳು ತಮ್ಮ ನಾಮಪತ್ರಗಳನ್ನು ಶಾಸಕ ಹೆಚ್.ಟಿ.ಮಂಜು, ರಾಜ್ಯ ಸಹಕಾರ ಮಹಾಮಂಡಳದ ಪ್ರಾದೇಶಿಕ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮೀಗೌಡ, ಶೀಳನೆರೆ ಮೋಹನ್, ಅಕ್ಕಿಹೆಬ್ಬಾಳು ರಘು, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿ.ಡಿ.ಹರೀಶ್, ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹಾದೇವೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಐನೋರಹಳ್ಳಿ ಮಲ್ಲೇಶ್, ಜಿಲ್ಲಾ ಯುವ ಜೆಡಿಎಸ್ ಕಾರ್ಯದರ್ಶಿ ಅಜಯ್ ರಾಮೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಕೊರಟೀಕೆರೆ ದಿನೇಶ್ ಮತ್ತಿತರರ ನೇತೃತ್ವದಲ್ಲಿ ಚುನಾವಣಾಧಿಕಾರಿ ಎಸ್.



ಯು.ಅಶೋಕ್ ಅವರಿಗೆ ಸಲ್ಲಿಸಿದ್ದಾರೆ.

ಅದೇ ರೀತಿ ಎ.ತರಗತಿಯ ಸೊಸೈಟಿ ಪ್ರತಿನಿಧಿಗಳ ಮೂಲಕ ಆಯ್ಕೆಯಾಗಬೇಕಾದ 6ಸ್ಥಾನಗಳಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಮಡುವಿನಕೋಡಿ ಎಂ.ಪಿ.ಲೋಕೇಶ್, ಬಲ್ಲೇನಹಳ್ಳಿ ಬಿ.ಸಿ.ರಮೇಶ್, ಕೋಡಿಮಾರನಹಳ್ಳಿ ಮಂಜೇಗೌಡ, ಸಾರಂಗಿ ವಿಶ್ವನಾಥ್, ಅಘಲಯ ಎ.ವೈ.ವಿ-ಜಯ್‌ಕುಮಾರ್, ಕಿಕ್ಕೇರಿ ಎ.ಸುರೇಶ್ ಅವರುಗಳು ತಮ್ಮ ನಾಮಪತ್ರಗಳನ್ನು ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾದ ಬಿ.ನಾಗೇಂದ್ರಕುಮಾರ್, ಹರಳಹಳ್ಳಿ ವಿಶ್ವನಾಥ್, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಡಿಸಿಸಿ ಬ್ಯಾಂಕ್ ಅಭ್ಯರ್ಥಿ ಜಿ.ಪಂ.ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್, ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮೀಗೌಡ ಮತ್ತಿತರರ ನೇತೃತ್ವದಲ್ಲಿ ಚುನಾವಣಾಧಿಕಾರಿ ಡಾ.ಎಸ್.ಯು. ಅಶೋಕ್ ಅವರಿಗೆ ಸಲ್ಲಿಸಿದರು.

ಬಿ.ತರಗತಿಯ ರೈತ ಕೃಷಿ ಶೇರುದಾರ ಸದಸ್ಯರಿಂದ ಆಯ್ಕೆಯಾಗಬೇಕಾದ 8ಸ್ಥಾನಗಳಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾಗಿ ಸಾಮಾನ್ಯ ವರ್ಗದಿಂದ ಕೆ.ಟಿ.ಗಂಗಾಧರ್, ಬೀರುವಳ್ಳಿ ಎನ್.ಎನ್. ಜಗದೀಶ್, ಹಿಂದುಳಿದ ಬಿ.ಮೀಸಲಾತಿ ಹೊನ್ನೇನಹಳ್ಳಿ ಹೆಚ್.ಎ.ಕೃಷ್ಣೇಗೌಡ, ಪ.ಜಾ. ಮೀಸಲಾತಿ ಚೆಲುವಯ್ಯ, ಪ.ಪಂ.ಮೀಸಲಾತಿ ಅಕ್ಕಿಹೆಬ್ಬಾಳು ಜಯರಾಂನಾಯಕ, ಬಿ.ಸಿ.ಎಂ. ಎ.ಮೀಸಲಾತಿಯಿಂದ ಎಸ್.ಎನ್.ಶಶಿಧರ್ ಸಂಗಾಪುರ, ಮಹಿಳಾ ಮೀಸಲು ಕ್ಷೇತ್ರದಿಂದ ಸುಕನ್ಯ ರಂಗನಾಥಪುರ, ಕೋಮಲ ಬೋಳಮಾರನಹಳ್ಳಿ ತಮ್ಮ ನಾಮ ಪತ್ರಗಳನ್ನು ಸಲ್ಲಿಸಿದ್ದಾರೆ. ಬಿ.ವರ್ಗದಿಂದ ಜೆಡಿಎಸ್-ಬಿಜೆಪಿ ಮೈತ್ರಿ ಪಕ್ಷದ ಅಭ್ಯರ್ಥಿಗಳಾಗಿ ಸಾಮಾನ್ಯ ಕ್ಷೇತ್ರದಿಂದ ಎಸ್.ಎಲ್. ಮೋಹನ್, ಕಿಕ್ಕೇರಿ ಕೆ.ಬಿ.ಮಧು, ಬಿ.ಸಿ.ಎಂ.ಬಿ ಮಲ್ಲೇನಹಳ್ಳಿ ಎಂ.ಮೋಹನ್, ಮಹಿಳಾ ಮೀಸಲು ಕ್ಷೇತ್ರದಿಂದ ಎಂ.ಡಿ.ಜ್ಯೋತಿ, ಬಂಡಿಹೊಳೆ ಬಿ.ಆರ್.ಲತಾಮಣಿಮಂಜುನಾಥ್, ಹಿಂದುಳಿದ ಎ.ವರ್ಗ ಬೀಕನಹಳ್ಳಿ ಈರೇಗೌಡ, ನಾಗರಘಟ್ಟ ದಿಲೀಪ್‌ಕುಮಾರ್, ಪ.ಜಾ. ಮೀಸಲಾತಿ ರಂಗನಾಥ-'ಪುರ ನಾಗರಾಜು, ಪ.ಪಂ.ಮೀಸಲಾತಿ ಬೊಮ್ಮೇನಹಳ್ಳಿ ಮಂಜುನಾಥ್ ತಮ್ಮ ನಾಮಪತ್ರವನ್ನು ಸಲ್ಲಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿಗಳಾಗಿ ಅಣ್ಣೇಚಾಕನಹಳ್ಳಿ ತಮ್ಮೇಗೌಡ, ಸೋಮನಹಳ್ಳಿ ಮಹಾದೇವ್, ಎಂ.ಎಸ್.ಕುಮಾರಸ್ವಾಮಿ ಅವರುಗಳು ನಾಮಪತ್ರ ಸಲ್ಲಿಸಿದ್ದಾರೆ. ಕಡೆಯ ದಿನವಾದ ಇಂದು ಎ.ತರಗತಿಯಿಂದ ಎಂ.ಎಸ್.ಕಾಂತರಾಜು ಮಾಂಬಹಳ್ಳಿ, ಬಿ.ತರಗತಿಯಿಂದ ಬಿ.ಎಲ್.ದೇವರಾಜು, ಎಸ್.ಎಂ.ಲೋಕೇಶ್, ಕೆ.ಕೆ.ನಂಜೇಗೌಡ, ಟಿ.ಎಂ.ಕಾಳೇಗೌಡ, ಎ.ಎಸ್.ನವೀನ್ ಅಪ್ಪನಹಳ್ಳಿ, ಕೆ.ಜಯರಾಂ ಕೈಗೋನಹಳ್ಳಿ, ಮಂಜೇಗೌಡ ಚೌಡೇನಹಳ್ಳಿ, ಕೋಮಲ, ಸುಕನ್ಯ ಅವರುಗಳು ತಮ್ಮ ನಾಮಪತ್ರವನ್ನು ಸಲ್ಲಿಸಿದ್ದಾರೆ. ಸಹ ಚುನಾವಣಾಧಿಕಾರಿಯಾಗಿ ತಾಲ್ಲೂಕು ಚುನಾವಣಾ ಶಾಖೆಯ ಶಿರಸ್ತೇದಾರ್ ಕೆ.ಎಸ್.ಹ-ರೀಶ್, ಟಿಎಪಿಸಿಎಂಎಸ್ ಸಂಸ್ಥೆಯ ಕಾರ್ಯದರ್ಶಿ ಎಸ್.ಬೋರೇಗೌಡ, ರವಿಕುಮಾರ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಟಿಎಪಿಸಿಎಂಎಸ್ ಚುನಾವಣೆಗೆ ಶುಕ್ರವಾರ ಮತ್ತು ಶನಿವಾರ ನಾಮಪತ್ರಗಳ ಸು-ರಿಮಳೆಯೇ ನಡೆಯಿತು. ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾರಣ ಕಾಂಗ್ರೆಸ್ ಪಕ್ಷಕ್ಕೆ ಈ ಚುನಾವಣೆಯು ಭಾರೀ ಪ್ರತಿಷ್ಠೆಯ ಕಣವಾಗಿದೆ. ಅದೇ ರೀತಿ ಮಂಡ್ಯ ಜಿಲ್ಲೆಯಲ್ಲಿ ಏಕೈಕ ಜೆಡಿ-ಎಸ್ ಶಾಸಕ ಎಂಬ ಹೆಗ್ಗಳಿಕೆಗೆ ಹೊಂದಿರುವ ಕೃಷ್ಣರಾಜಪೇಟೆ ಶಾಸಕ ಹೆಚ್.ಟಿ.ಮಂಜು ಅವರಿಗೂ ತಮ್ಮ ಶಕ್ತಿ ಪ್ರದರ್ಶನ ಮಾಡಲು ಟಿಎಪಿಸಿಎಂಎಸ್ ಚುನಾವಣೆಯ ಗೆಲುವು ಭಾರಿ ಪ್ರತಿಷ್ಠೆಯ ಕಣವಾಗಿದ್ದು 14ಕ್ಷೇತ್ರಗಳಿಗೂ ಚುನಾವಣೆಯ ನಡೆಯುತ್ತಿದ್ದು, ತೀವ್ರ ಜಿದ್ದಾಜಿದ್ದಿಯ ಹೋರಾಟ ಕಂಡು ಬರುತ್ತಿದೆ. ಅಂತಿಮವಾಗಿ ಗೆಲುವು ಯಾವ ಪಕ್ಷಕ್ಕೆ ಒಲಿಯುತ್ತದೆ ಎಂಬುದನ್ನು ಸೆ.28ವರೆಗೆ ಕಾದು ನೋಡಬೇಕಾಗಿದೆ.

**ವರದಿಯೋಂದಿಗೆ: ಸಾಯಿಕುಮಾರ್. ಎನ್. ಕೆ,**

# ಮಾಗಡಿ ಪಟ್ಟಣದಲ್ಲಿಅಭಿವೃದ್ಧಿ ಮರೀಚಿಕೆ :ಎ ಮಂಜುನಾಥ್

ಮಾಗಡಿ: ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಅನುದಾನ ತಂದಿದ್ದೀರಿ ಎಂಬುದರ ಬಗ್ಗೆ ಚರ್ಚೆಗೆ ಬನ್ನಿ ಎಂದು ಮಾಜಿ ಶಾಸಕ ಎ. ಮಂಜುನಾಥ್ ಅವರು ಹಾಲಿ ಶಾಸಕ ಹೆಚ್. ಸಿ. ಬಾಲಕೃಷ್ಣರವರಿಗೆ ಸವಾಲು ಹಾಕಿದರು. ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಶಾಸಕ ಎಚ್ ಸಿ ಬಾಲಕೃಷ್ಣರವರು ಮಾಗಡಿ ತಾಲೂಕನ್ನು ಸಮಗ್ರ ಅಭಿವೃದ್ಧಿ ಮಾಡುತ್ತೇನೆಂದು ಬಡಾಯಿ ಕೊಚ್ಚಿಕೊಳ್ಳುತ್ತಾರೆ ಇವರ ಯೋಗ್ಯತೆಗೆ ಗೆದ್ದ ನಂತರ ಕ್ಷೇತ್ರದಲ್ಲಿ 10 ಕಿ.ಮೀ ಹೊಸದಾಗಿ ರಸ್ತೆಗೆ ಟಾರ್ ಹಾಕಿರುವುದನ್ನು ತೋರಿಸಲಿ.



ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ವಿದ್ಯುತ್ ಕ್ಷೇತ್ರದಲ್ಲಿ ನೂರಾರು ಕೋಟಿ ಅನುದಾನವನ್ನು ತಂದಿರುವುದನ್ನು ತೋರಿಸಲಿ ಎಂದ ಅವರು ಮಾಜಿ ಸಂಸದ ಡಿ ಕೆ ಸುರೇಶ್ ರವರ ಅವಧಿಯಲ್ಲಿ ನೀಡಿದ ಅನುದಾನದಲ್ಲಿ ಕಾವೇರಿ ನೀರಾವರಿ ನಿಗಮ ವಿಶ್ವೇಶ್ವರಯ್ಯ ಅಭಿವೃದ್ಧಿ ನಿಗಮ ಹಾಗೂ ಇತರ ನಿಗಮಗಳಿಂದ ಕಾಮಗಾರಿ ಮಾಡಿಸುತ್ತಿದ್ದಾರೆಯೇ ಹೊರತು ಸರಕಾರದಿಂದ ಹೊಸದಾಗಿ ಯಾವುದೇ ಅನುದಾನವನ್ನು ತಂದಿಲ್ಲ ಒಬ್ಬ ಮುಖ್ಯಮಂತ್ರಿಯನ್ನು ಕರೆದುಕೊಂಡು ಬಂದು ಒಂದೆರಡು ಕೋಟಿಯಲ್ಲಿ ಕಾಮಗಾರಿಗೆ ಚಾಲನೆ ಕೊಡಿಸುತ್ತಾರೆ ನಾನು ಶಾಸಕನಾಗಿದ್ದ ಅವಧಿಯಲ್ಲಿ ಮುಖ್ಯಮಂತ್ರಿಗಳನ್ನು ಕರೆದು 700 ಕೋಟಿ ರೂ ಅನುದಾನದ ಕಾಮಗಾರಿಗೆ ಚಾಲನೆ ಕೊಡಿಸಿದ್ದೆ ಎಂದು ಎ ಮಂಜುನಾಥ್ ಹೇಳಿದರು.

ರಾಜ್ಯದಲ್ಲಿ ಪ್ರಪ್ರಥಮವಾಗಿ ಆನ್ಲೈನ್ ತಂತ್ರಾಂಶದ ಮೂಲಕ ಡಿಜಿಟಲ್ ಹಾಗೂ ಪತ್ರವನ್ನು ವಿತರಣೆ ಮಾಡಿದ್ದೇವೆ ಎಂದು ಶಾಸಕರು ಹೇಳುತ್ತಿದ್ದು ಇದನ್ನು ಪರಿಶೀಲನೆ ನಡೆಸಿದಾಗ ಆರು, ಎಂಟು ಗುಂಟೆ ಹೆಚ್ಚೆಂದರೆ 1.10 ಎಕರೆಯ ಹಕ್ಕು ಪತ್ರ ವಿತರಣೆ ಮಾಡಿದ್ದಾರೆ. ತಾಲೂಕಿನಲ್ಲಿ ರೈತರು ನಮೂನೆ 54 ರಲ್ಲಿ ಹಾಕಿಕೊಂಡಿದ್ದ 11,000 ಅರ್ಜಿಗಳು ವಜಾ ಮಾಡಿದ್ದಾರೆ. ಇದರ ಮಾಹಿತಿಯನ್ನು ಶಾಸಕರು ಮುಚ್ಚಿಟ್ಟು ರೈತರಿಗೆ ದ್ರೋಹ ಮಾಡುತ್ತಿದ್ದಾರೆಂದು ಮಾಜಿ ಶಾಸಕರು ಆರೋಪಿಸಿದರು. ಎನ್‌ಇಎಸ್ ವೃತ್ತದಲ್ಲಿದ್ದ ಗಾಂಧಿ ಪ್ರತಿಮೆಯ ಕುತ್ತಿಗೆಗೆ ಹಗ್ಗ ಹಾಕಿ ಅದನ್ನು ತೆರವುಗೊಳಿಸಿದ್ದು, ಇದಕ್ಕೆ ವಿರೋಧ ವ್ಯಕ್ತಪಡಿಸಿದ ನಮ್ಮ ಕಾರ್ಯಕರ್ತರ ವಿರುದ್ಧ ಲೋಕೋಪಯೋಗಿ ಇಂಜಿನಿಯರ್ ಮೇಲೆ ಒತ್ತಡ ಹಾಕಿಸಿ ಎಫ್ ಐ ಆರ್ ಹಾಕಿಸಿದ್ದಾರೆ.

ಇದರ ಬಗ್ಗೆ ಕೇಳಿದರೆ ನನಗೆ ಗೊತ್ತಿಲ್ಲ ಎಂದು ಬಾಲಕೃಷ್ಣ ನವರಂಗಿ ಆಟ ಆಡುತ್ತಿದ್ದಾರೆ ಇವರ ಬೆದರಿಕೆಗೆ ನಾವು ಬಗ್ಗುವುದಿಲ್ಲ ಕಾನೂನು ಪ್ರಕಾರ ಹೋರಾಟ ನಡೆಸುತ್ತೇವೆ ಇವರು ನಾಲ್ಕು ಬಾರಿ ಶಾಸಕರಾಗಿದ್ದ ಅವಧಿಯಲ್ಲಿ ಮಹನೀಯರ ಒಂದು ಪುತ್ತಳಿಯನ್ನು ಪ್ರತಿಷ್ಠಾಪಿಸಲಿಲ್ಲ ಎಚ್ ಎಮ್ ಕೃಷ್ಣಮೂರ್ತಿ ಅವರು ಕೆಂಪೇಗೌಡರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿಸಿದರು. ನಾನು ಶಾಸಕನಾಗಿದ್ದ ಅವಧಿಯಲ್ಲಿ ಹೇಮಾವತಿ ನೀರಾವರಿಯ ಕಾಮಗಾರಿ ಬಹಳಷ್ಟು ಮುಗಿದಿದ್ದು ಸ್ವಲ್ಪ ದೂರ ಪೈಪ್ಲೈನ್ ಕಾಮಗಾರಿ ನಡೆಯಬೇಕಿತ್ತು ಟ್ರಾನ್ಸ್ಫಾರ್ಮರ್ ಅಳವಡಿಸಿದ್ದರೆ ತಾಲೂಕಿನ ಬಹಳಷ್ಟು ಕೆರೆಗಳಿಗೆ ನೀರು ಬರುತ್ತಿತ್ತು ಈ ವಿಷಯದ ಬಗ್ಗೆ ನನ್ನನ್ನು ವ್ಯಂಗ್ಯ ಮಾಡುತ್ತಿದ್ದು ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಿದರೆ ಎ ಮಂಜು ಮಾಜಿ ಉಪ ಮುಖ್ಯಮಂತ್ರಿ ಅಶ್ವತ್ ನಾರಾಯಣ್, ಎಚ್ ಎಮ್ ರೇವಣ್ಣರವರಿಗೆ ಹೆಸರು ಬರುತ್ತದೆ ಎಂಬ ದುರುದ್ದೇಶದಿಂದ ಶಾಸಕರು ಕಾಮಗಾರಿಯನ್ನು ವಿಳಂಬ ಮಾಡಿದ್ದಾರೆಂದು ಎ ಮಂಜು ಆರೋಪಿಸಿದರು.

ಕೆ ಆರ್ ಡಿ ಎಲ್ ಅಧ್ಯಕ್ಷರಾಗಿರುವ ಬಾಲಕೃಷ್ಣ ಅವರ ಕುಟುಂಬದವರು ಕಳಪೆ ಕಾಮಗಾರಿಯನ್ನು ನಡೆಸುತ್ತಿದ್ದು ಬಹಳಷ್ಟು ಕಳ್ಳ ಬಿಲ್ಲುಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ತಾವರೆಕೆರೆ ಹೋಬಳಿಯಲ್ಲಿ ಬಹಳಷ್ಟು ಭೂಮಿಯನ್ನು ಗುಳು ಮಾಡಿದ್ದು ಕಳೆದ ಐದು ವರ್ಷದಲ್ಲಿ ನಾನು ಒಂದೇ ಒಂದು ಇಂಚು ಸರಕಾರಿ ಭೂಮಿಯನ್ನು ತೆಗೆದುಕೊಂಡಿರುವುದನ್ನು ಸಾಬೀತುಪಡಿಸಿದರೆ ನಾನು ರಾಜಕೀಯ ನಿವೃತ್ತಿಯನ್ನು ಪಡೆಯುತ್ತೇನೆ ಬಾಲಕೃಷ್ಣರವರು ಭೂಮಿಯನ್ನು ಗುಳು ಮಾಡಿರುವ ಬಗ್ಗೆ ಸಮಗ್ರ ಮಾಹಿತಿಯನ್ನು ಕಂದಾಯ ಸಚಿವರಿಗೆ ಸಲ್ಲಿಸುತ್ತೇನೆ ಎಂದು ಮಾಜಿ ಶಾಸಕರು ಹೇಳಿದರು ಸೋಲೂರು ಹೋಬಳಿ ನೆಲಮಂಗಲ ಕ್ಷೇತ್ರಕ್ಕೆ ಸೇರ್ಪಡೆಯಾಗುವ ಬಗ್ಗೆ ಶಾಸಕರು ಹೋರಾಟ ನಡೆಸಿದರೆ ನಾನು ಹಾಗೂ ನಮ್ಮ ಕಾರ್ಯಕರ್ತರು ಅವರಿಗೆ ಬೆಂಬಲ ನೀಡುತ್ತೇವೆ ಎಂದರು ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯ ಕೆ ವಿ ಬಾಲ ರಘು, ಕೆಟಿ ಮಂಜುನಾಥ್, ಬೆಳಗುಂಬ ವಿ ಎಸ್ ಎಸ್ ಅಧ್ಯಕ್ಷ ರಂಗನಾಥ್, ಉಪಾಧ್ಯಕ್ಷ ಗಂಗರೇವಣ್ಣ, ಯುವ ಘಟಕದ ಅಧ್ಯಕ್ಷ ವಿಜಯ್ ಕುಮಾರ್, ಸಿಡಗನಹಳ್ಳಿ ವೆಂಕಟೇಶ್, ಸುಹೇಲ್, ಕೆಂಪೇಗೌಡ, ಪಂಚೆ ರಾಮಣ್ಣ, ಶಿವರಾಮಯ್ಯ ಉಪಸ್ಥಿತರಿದ್ದರು.

# ಸಾಲ ಪಡೆದವರು ಸಕಾಲದಲ್ಲಿ ತೀರಿಸಿದರೆ ಬೇರೆಯವರಿಗೆ ಸಾಲ ನೀಡಬಹುದು

ಮಾಲೂರು: ಸಹಕಾರ ಸಂಘ ಗಳಲ್ಲಿ ಸಾಲ ಪಡೆದವರು ಸಕಾಲಕ್ಕೆ ಸಾಲ ಮರುಪಾವತಿ ಮಾಡಿದರೆ ಮಾತ್ರ ಬೇರೆಯವರಿಗೆ ಅವಕಾಶ ಕಲ್ಪಿಸಿ ಕೊಡಬಹುದು ಎಂದು ಶ್ರೀ ವಾಸವಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಎಸ್‌ವಿ ಅಶ್ವತ್ ನಾರಾಯಣ್ ಹೇಳಿದರು. ನಗರದ ದೊಡ್ಡಪೇಟೆಯ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಶ್ರೀ ವಾಸವಿ ಸೌಹಾರ್ದ ಸಹಕಾರಿ ಸಂಘದ 2024– 25 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಶ್ರೀ ವಾಸವಿ ಸೌಹಾರ್ದ ಸಹಕಾರಿ ಸಂಘವು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದ ಸಂಘ ಹಾಗೂ ಜನತೆಗೆ ತುಂಬಾ ಅನುಕೂಲವಾಗುವ ಸಂಘವಾಗಿರುತ್ತದೆ.

ಸಂಘವು ಪ್ರತಿ ವರ್ಷವೂ ಸಹ ಷೇರುದಾರರಿಗೆ 10% ಬಡ್ಡಿಯನ್ನು ಕೊಡುವ ಮೂಲಕ ವರ್ಷಕ್ಕೆ ಒಂದರಂತೆ ಹೊಸ ಕೊಡುಗೆಗಳನ್ನು ಕೊಡುತ್ತಿದೆ 2024ನೇ ಸಾಲಿನಲ್ಲಿ ಗೃಹಿಣಿಯರಿಗೆ ಗಣೇಶ ಹಬ್ಬದ ಪ್ರಯುಕ್ತ ಗೌರಿ ಪೂಜೆಗೆ ಸುಮಂಗಳಿ ಸ್ಕೀಮ್ ಎನ್ನುವ ಹೊಸ ಕೊಡುಗೆಯನ್ನು ತಂದಿದ್ದು ಪ್ರತಿ ವರ್ಷ ಹೆಣ್ಣು ಮಕ್ಕಳಿಗೆ ಉಡುಗೊರೆ ಜೊತೆಗೆ 1,000 ಇದರಿಂದ ದೊರೆಯುತ್ತದೆ ಅದೇ ರೀತಿ ಈ ವರ್ಷವೂ ಸಹ ಒಂದು ಹೊಸ ಕೊಡುಗೆ ತರುತ್ತಿದ್ದೇವೆ ಅದು ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕಾಗಿ ಪೋಷಕರು ಪ್ರತಿದಿನ 100 ರಿಂದ 1000 ರೂಪಾಯಿ ಹೆಚ್ಚಿನ ಹಣವನ್ನು ಕಟ್ಟುವ ಮೂಲಕ ಒಂದು ವರ್ಷಕ್ಕೆ ಅಂದರೆ 365 ದಿನ ಆದಮೇಲೆ 366ನೇ ದಿನ ಬಡ್ಡಿ ಸಮೇತ ಅದನ್ನು ಹಿಂಪಡೆದು ಮಕ್ಕಳ ಮುಂದಿನ ಭವಿಷ್ಯಕ್ಕೆ ಉಪಯೋಗಿಸುವ ಕಾರ್ಯಕ್ರಮವಾಗಿರುತ್ತದೆ. ಈಗಾಗಲೇ ಈ ಸಂಘದಲ್ಲಿ ಸಾವಿರಕ್ಕಿಂತ ಹೆಚ್ಚಿನ ಸದಸ್ಯರಿದ್ದು ಮುಂದಿನ ದಿನಗಳಲ್ಲಿ ಇದರ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದ್ದು ಸುಮಾರು ಏಳು ಲಕ್ಷದವರೆಗೆ ಸಂಘದಲ್ಲಿ ಉಳಿತಾಯವಿರುವುದು ನಮ್ಮೆಲ್ಲರಿಗೂ ಸಂತಸವನ್ನುಂಟು ಮಾಡಿದೆ ಎಂದು ನುಡಿದರು.

ಈ ಸಂದರ್ಭದಲ್ಲಿ ಶ್ರೀ ವಾಸವಿ ಸೌಹಾರ್ದ ಸಂಘದ ಉಪಾಧ್ಯಕ್ಷ ಎನ್ ಜೆ ಅಜಯ್, ನಿರ್ದೇಶಕರಾದ ಎನ್ ಲಕ್ಷ್ಮಿ ಶ್ರೀನಾಥ್, ಎಸ್ ವಿಕೆ ಪ್ರಸಾದ್, ಕೆ ಆರ್ ಶ್ರೀನಾಥ್, ಸೌಭಾಗ್ಯ ಲಕ್ಷ್ಮಿ, ಬಿ ಎನ್ ಮಾನಸ, ಎನ್ ಎಸ್ ನಟೇಶ್, ಬಿ ಎನ್ ತುಷಾರ್, ಪವನ್ ಕುಮಾರ್ ಪಟೇಲ್, ನಾಮ ನಿರ್ದೇಶಕ ಜನಾರ್ಧನ್ ರಾಜು, ಬಂಡವಾಳದಾರರು, ಷೇರುದಾರರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು




# ಬೆಂಗಳೂರಿನಲ್ಲಿ ತನ್ನ ಮೊದಲ ಮಳಿಗೆಯನ್ನು ಉದ್ಘಾಟಿಸಿದ ಪುರುಷರ ಫ್ಯಾಷನ್ ಬ್ರಾಂಡ್ ಕಿಸಾಹ್

ಬೆಂಗಳೂರು: 2025–ಆಕರ್ಷಕ ಬಣ್ಣಗಳು ಮತ್ತು ಮನಮೋಹಕ ವಿನ್ಯಾಸಗಳಿಗೆ ಹೆಸರಾದ ಪುರುಷರ ಫ್ಯಾಷನ್ ಬ್ರಾಂಡ್ ಆಗಿರುವ ಕಿಸಾಹ್ ಇಂದು ಬೆಂಗಳೂರಿನಲ್ಲಿ ತನ್ನ ಮೊದಲ ಮಳಿಗೆಯನ್ನು ಉದ್ಘಾಟಿಸಿದೆ.
ಕೊಲ್ಕತ್ತಾದಾಚೆಗೆ ರಿಟೇಲ್ ಉದ್ಯಮ ವಿಸ್ತರಿಸುವ ಕಿಸಾಹ್ ಬ್ರಾಂಡ್ ನ ಪಯಣದಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದ್ದು, ಈ ಬ್ರಾಂಡ್ ಈಗಾಗಲೇ ಭಾರತದ ಹಲವು ನಗರಗಳಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಆನ್‌ಲೈನ್ ಡಿ2ಸಿ ಚಾನಲ್ ಮೂಲಕ ಲಭ್ಯವಿದೆ.



ಆಕರ್ಷಕ ಮತ್ತು ಪ್ರಯೋಗಾತ್ಮಕ ಎತ್ನಿಕ್ ಉಡುಗೆಗಳನ್ನು, ಹೊಸ ತಲೆಮಾರಿನವರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕಿಸಾಹ್ ಅನ್ನು ಸ್ಥಾಪಿಸಲಾಯಿತು.
ಜೆನ್ ಜೀ ಮತ್ತು ಸ್ಟೈಲ್ ಅನ್ನು ಪಾಲಿಸುವ ಪುರುಷರಿಗೆಂದೇ ವಿನ್ಯಾಸಗೊಳಿಸಲಾದ ಕಿಸಾಹ್ ಸಂಸ್ಥೆ ಆನ್‌ಲೈನ್ ನಲ್ಲಿ ಉಪಸ್ಥಿತಿ ಹೊಂದಿದೆ ಮತ್ತು ಕೋಲ್ಕತ್ತಾದಲ್ಲಿ ಮೂರು ಮಳಿಗೆಗಳನ್ನು ಹೊಂದಿದೆ. ಇದೀಗ ಕಿಸಾಹ್ ಬೆಂಗಳೂರಿನ ಫ್ಯಾಷನ್ ಆಸಕ್ತರನ್ನು ತಲುಪಲು ಮುಂದಾಗಿದೆ. ಹೊಸ ಮಳಿಗೆ ಉದ್ಘಾಟಿಸಿ ಮಾತನಾಡಿದ ಕಿಸಾಹ್ ಅಪೇರಲ್ಸ್ ಪ್ರೈ. ಲಿಮಿಟೆಡ್ ನ ಸಹ ಸಂಸ್ಥಾಪಕ ಯಶ್ ಸರವಗಿ ಅವರು, "ಇಂದಿರಾನಗರದಲ್ಲಿ ಆರಂಭವಾಗಿರುವ ಕಿಸಾಹ್ ನ ಹೊಸ ಮಳಿಗೆಯ ನಿಜಕ್ಕೂ ನಮಗೆ ಮಹತ್ವದ ಮೈಲುಗಲ್ಲಾಗಿದೆ.

ಬೆಂಗಳೂರು ನಮ್ಮ ಆನ್ ಲೈನ್ ಚಾನಲ್ ಗಳಲ್ಲಿ ಬಹಳ ಪ್ರೀತಿಯನ್ನು ತೋರಿದ ನಗರ. ಇಲ್ಲಿ ನಮ್ಮ ದಿರಿಸುಗಳು ಅತಿ ಹೆಚ್ಚು ಮಾರಾಟವಾಗಿವೆ. ಇಲ್ಲಿನ ತಾರುಣ್ಯಪೂರ್ಣ ಯುವಜನತೆ ಮತ್ತು ಹುಮ್ಮಸ್ಸಿನ ಸಂಸ್ಕೃತಿಯು ಕಿಸಾಹ್ ಫ್ಯಾಷನ್ ಜೊತೆ ಸಂಪೂರ್ಣವಾಗಿ ಸರಿಹೊಂದುತ್ತದೆ. ನಾವು ಈ ಮಳಿಗೆಯನ್ನು ಬೆಂಗಳೂರಿನ ಯುವಕರನ್ನುಗಮನದಲ್ಲಿಟ್ಟುಕೊಂಡೇ ರೂಪಿಸಿದ್ದೇವೆ. ಈ ಮಳಿಗೆಯು ಅವರಿಗೆ ಅತ್ಯುತ್ತಮ ಅನುಭವ ಒದಗಿಸಲಿದೆ" ಎಂದು ಹೇಳಿದರು.
ಇಂದಿರಾನಗರದ 100 ಅಡಿ ರಸ್ತೆಯ ಶ್ರೇಯಸ್ ಪ್ಲಾಜಾದ ಗ್ರೌಂಡ್ ಫ್ಲೋರ್ ನ ಶಾಪ್ ನಂ. 2012 ಕಿಸಾಹ್ ಮಳಿಗೆ ಕಾರ್ಯಾರಂಭ ಮಾಡಿದೆ.

# ಕರ್ನಾಟಕ ಗ್ರಾಮೀಣ ಬ್ಯಾಂಕ್ ಗೆ ರೈತರ ಮುತ್ತಿಗೆ ಪ್ರತಿಭಟನೆ

ಪಾವಗಡ: ಕೃಷಿ ಸಾಲದ ಮೇಲೆ ಹೆಚ್ಚಿನ ಬಡ್ಡಿ ವಿಧಿಸಿ ರೈತರಿಂದ ಸಾಲ ವಸೂಲಾತಿಗೆ ಮುಂದಾದ ಕ್ರಮ ಹಾಗೂ ಬ್ಯಾಂಕ್ ವ್ಯವಸ್ಥಾಪಕನ ದೌರ್ಜನ್ಯ ಖಂಡಿಸಿ, ಗ್ರಾಮೀಣ ಪ್ರದೇಶದ ನೂರಾರು ಮಂದಿ ರೈತರು ಗುರುವಾರ ಪಟ್ಟಣದ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ನಡೆಸಿದರು. ಬೆಳೆ ವಿಮೆ, ಇತರೆ ಕೃಷಿ ಸಾಲಗಳ ಮೇಲೆ ಶೇ.ಹೆಚ್ಚಿನ ಬಡ್ಡಿ ವಿಧಿಸಿ ವಸೂಲಿಗೆ ಮುಂದಾದ ಕ್ರಮದಿಂದ ರೈತರು ಹೈರಾಣಿಗಿದ್ದು ಬೆಳೆ ನಷ್ಟದಿಂದ ಅಸಲು ಸಾಲ ಕಟ್ಟಲು ಕೂಡ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.



ಇಂತಹ ಕಷ್ಟ ಕಾಲದಲ್ಲಿ 1ಲಕ್ಷ ಸಾಲಕ್ಕೆ ಹೆಚ್ಚಿನ ಬಡ್ಡಿ ವಿಧಿಸಿ ಅಸಲು ಹಾಗೂ ಬಡ್ಡಿ ಸಮೇತ ಕಟ್ಟುವಂತೆ ಬ್ಯಾಂಕ್ ವ್ಯವಸ್ಥಾಪಕ ನೋಟಿಸ್ ನೀಡಿ ಧಮಾಕಿ ಹಾಕುತ್ತಿದ್ದಾರೆ.ಇದರಿಂದ ರೈತರಿಗೆ ತೀವ್ರ ಸಮಸ್ಯೆ ಅಗಿದೆ ಎಂದು ತಾಲೂಕಿನ ಸೂಲನಾಯನಹಳ್ಳಿ,ಎತ್ತಿನಹಳ್ಳಿ,ಪೊನ್ನಸಮುದ್ರ,ಸಿಂಗರೆಡ್ಡಿಹಳ್ಳಿ ಬೂದಿಬೆಟ್ಟ,ನಾಗಲಮಡಿಕೆ ವಳ್ಳೂರು ಇತರೆ ಗ್ರಾಮದ ನೂರಾರು ಮಂದಿ ರೈತರು ಪಟ್ಟಣದ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಮುತ್ತಿಗೆ ಹಾಕಿ ಸಾಲ ವಸೂಲಾತಿಯಲ್ಲಿ ಬ್ಯಾಂಕ್ ವ್ಯವಸ್ಥಾಪಕನ ಕಿರುಕುಳದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.
ಈ ವೇಳೆ ಪ್ರತಿಭಟನೆ ನೇತೃತ್ವ ವಹಿಸಿ ರೈತ ಸಂಘದ ಜಿಲ್ಲಾಧ್ಯಕ್ಷ ಪೂಜಾರಪ್ಪ ಮಾತನಾಡಿ,ಕಳೆದ ಮೂರು ನಾಲ್ಕು ವರ್ಷದ ಹಿಂದೆ ಜಮೀನ ಬೆಳೆ ಅದಾರದ ಮೇಲೆ 4ಲಕ್ಷ ಸಾಲಪಡಿದಿದ್ದು,ಬೆಳೆ ನಷ್ಟದಿಂದ ಸಕಾಲಕ್ಕೆ ಸಾಲ ತಿರುವಳಿ ಮಾಡಲು ಸಾಧ್ಯವಾಗಲಿಲ್ಲ. ಈಗ ನಾಲ್ಕು ಲಕ್ಷ ಕೃಷಿ ಸಾಲಕ್ಕೆ ಅಸಲು ಬಿಟ್ಟು 20ಲಕ್ಷ ಬಡ್ಡಿ ವಿಧಿಸಿದ್ದಾರೆ.

ಅಸಲು ಬಡ್ಡಿ ಸೇರಿ 24ಲಕ್ಷ ಕಟ್ಟಿ ಅಂತಾ ಸಾಲಗಾರ ರೈತರ ಮೇಲೆ ಒತ್ತಡ ಹಾಕುತ್ತಿದ್ದಾರೆ.ಈ ರೀತಿ ಬ್ಯಾಂಕ್‌ನ ವ್ಯವಸ್ಥಾಪಕ ಸಿಬ್ಬಂದಿ ಒತ್ತಡ ಹೇರಿದರೆ,ಸಾಲಕಟ್ಟಲು ಸಾಧ್ಯವಾಗದೇ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುತ್ತಿದ್ದಾರೆ.,ಸಾಲದ ಕಿರುಕುಳದಿಂದ ರೈತ ಆತ್ಮಹತ್ಯೆ ಮಾಡಿಕೊಂಡರೆ ಇದರ ಹೊಣೆ ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಧಿಕಾರಿಗಳ ಹೊರಬೇಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.
ಬಾರತೀಯ ಸ್ಟೇಟ್ ಬ್ಯಾಂಕ್ ಇತರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕೃಷಿ ಸಾಲ ನೀಡಿದ್ದು ಬೆಳೆನಷ್ಟದಿಂದ ರೈತರ ಸಂಕಷ್ಟ ಅರಿತ ಬ್ಯಾಂಕ್‌ಗಳು 5ಲಕ್ಷ ಸಾಲಕ್ಕೆ ಬಡ್ಡಿ ರಹಿತ ಅಸಲಿನಲ್ಲಿ ಶೇ.10ರಿಂದ 15ರಷ್ಟು ಹಣ ಕಟ್ಟಿಸಿಕೊಂಡು ಸಾಲ ಮೊನ್ನ ಮಾಡುತ್ತಿದ್ದಾರೆ.

ಆರ್‌ಬಿಐ ನಿರ್ದೇಶನದ ಮೇರೆಗೆ ಎಸ್‌ಬಿಐ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳು ಕಾರ್ಯನ್ಮುಖವಾಗಿದ್ದು,ಈ ನಿಯಮ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಏಕೆ ಅಪ್ಲೆ ಅಗುತ್ತಿಲ್ಲ.ಇದೇ ಬ್ಯಾಂಕಿನಲ್ಲಿ ಕಳೆದ ಮೂರು ವರ್ಷದ ಹಿಂದೆ ಪಡೆದ 1ಲಕ್ಷ ಕೃಷಿ ಸಾಲ ಪಡೆದಿದ್ದ ರೈತರಿಗೆ,ಎಳೆಂಟು ಲಕ್ಷ ಬಡ್ಡಿ ಬಂದಿದೆ ಎಂದರೆ ಯಾವ ರೀತಿ ರೈತ ಸಾಲ ತೀರುವಳಿ ಮಾಡಬೇಕು.ಇದು ರೈತರಿಗೆ ಹೊರೆ ಎಲ್ಲವೇ ಎಂದು ಪ್ರಶ್ನಿಸಿದರು.ನಿಯಮ ಸಡಿಲಗೊಳಿಸಿ ಕೃಷಿ ಸಾಲಗಳ ಬಡ್ಡಿ ರಹಿತ ಅಸಲಿನಲ್ಲಿ ಶೇ.10ರಿಂದ 15ರಷ್ಟು ಹಣ ಕಟ್ಟಿಸಿಕೊಂಡು ರೈತರ ಕೃಷಿ ಸಾಲ ಮೊನ್ನ ಮಾಡುವಂತೆ ಸ್ಥಳಕ್ಕೆ ಅಗಮಿಸಿದ್ದ ಕೆಜಿಬಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಎಜಿಎಂಗೆ ಒತ್ತಾಯಿಸಿದರು.

ರೈತ ಮುಖಂಡ ಎತ್ತಿನಹಳ್ಳಿ ಪ್ರಸಾದ್‌ರೆಡ್ಡಿ ಮಾತನಾಡಿ,ಕೃಷಿ ಸಾಲಕ್ಕೆ ಹೆಚ್ಚಿನ ಬಡ್ಡಿ ವಿಧಿಸಿ ಅಸಲು ಬಡ್ಡಿ ಕಟ್ಟುವಂತೆ ಕೆಜಿಬಿ ಬ್ಯಾಂಕ್ ನವರು ಒತ್ತಡವೇರುತ್ತಿರುವ ಪರಿಣಾಮ ದಿಕ್ಕುತೋಚದಾಂಗಿದೆ.ಬ್ಯಾಂಕ್ ವ್ಯವಸ್ಥಾಪಕ ಕಿರುಕುಳ,ಸಾಲದ ಒತ್ತಡ ಸೇರಿದಂತೆ ಅಸಲು ಸಾಲದಲ್ಲಿ ಶೇ.10ರಿಂದ 15ರಷ್ಟು ಸಾಲದ ಹಣ ಕಟ್ಟಿಸಿಕೊಂಡು ಸಾಲ ಸುಸ್ತಿ ಮಾಡುವಂತೆ ಮನವಿ ಸಲ್ಲಿಸಿದ್ದು,ಇನ್ನೂ ಒಂದು ರೈತರ ಸಾಲದ ಸಮಸ್ಯೆ ಬಗ್ಗೆ ಹರಿಸುವುದಾಗಿ ಬ್ಯಾಂಕ್‌ನ ಎಜಿಎಂ ಅವರು ಭರವಸೆ ನೀಡಿದ್ದಾರೆ.
ಸಮಸ್ಯೆ ಬಗೆಹರಿಸದಿದ್ದರೆ,ಬ್ಯಾಂಕ್ ಬಳಿ ರೈತರಿಂದ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.ರೈತ ಮುಖಂಡ ವೈ.ಎನ್. ಹೊಸಕೋಟೆ ಎಸ್.ಟಿ.ನಾಗರಾಜ್, ತಿಮ್ಮಾರೆಡ್ಡಿ, ಸೂಲನಾಯಕನಹಳ್ಳಿಯ ಮಂಜು,ಶನಿವಾರಪ್ಪ, ಸುಬ್ರಮಣ್ಯಂ ಹಾಗೂ ರೈತ ಸಂಘದ ನಾರಾಯಣರೆಡ್ಡಿ, ತಾಲೂಕು ಅಧ್ಯಕ್ಷ ಶಿವು.ಜಿಲ್ಲಾ ರೈತ ಸಂಘದ ದಂಡುಪಾಳ್ಯ ರಾಮಾಂಜಿನಪ್ಪ,ರಮೇಶ್,ತಾಳೇ ಮರದಹಳ್ಳಿ ಗೋವಿಂದಪ್ಪ, ನಾಗರಾಜಪ್ಪ ಚಿತ್ತಯ್ಯ ಸದಾಶಿವಪ್ಪ,ಹನುಮಂತರಾಯಪ್ಪ ವೀರಭದ್ರಪ್ಪ,ಮಂಜುನಾಥ್ ಹಾಗೂ ಇತರೆ ಅನೇಕ ಮಂದಿ ರೈತ ಮುಖಂಡರಿದ್ದರು.
ಕೃಷಿ ಸಾಲ ಹೆಚ್ಚಿನ ಬಡ್ಡಿ ವಸೂಲಾತಿ ವಿರೋಧಿಸಿ ಜಿಲ್ಲಾಧ್ಯಕ್ಷ ಪೂಜಾರಪ್ಪ,ಎತ್ತಿನಹಳ್ಳಿ ಪ್ರಸಾದ್‌ರೆಡ್ಡಿ ನೇತೃತ್ವದಲ್ಲಿ ನೂರಾರು ಮಂದಿ ತಾಲೂಕಿನ ರೈತ ಮುಖಂಡರು ಪಟ್ಟಣದ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಮುತ್ತಿಗೆ ಹಾಕಿರುವುದು.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.